ಎಳೆದು ತಿಂದು ಚಿರತೆಗಳು ಓಡುವುದನ್ನು ಗಮನಿಸುತ್ತಲೇ ಇದ್ದೆ.

ತಮಗಿಂತ ಎಂಟತ್ತು ಪಟ್ಟು ದೊಡ್ಡದಾದ ಕಾಡೆಮ್ಮೆಯನ್ನು ಆ ಹಳ್ಳದಿಂದ ಮೇಲೆತ್ತಿಕೊಂಡು ಹೋಗಿ ಮರದ ಮೇಲೆ ಇಟ್ಟುಕೊಳ್ಳುವುದು ಚಿರತೆಗಳಿಗೆ ಖಂಡಿತ ಸಾಧ್ಯವಾಗದ ಕೆಲಸ. ಹೀಗಾಗಿ ಹಸಿವಾದಾಗ ತಿಂದು ಹೋಗಿ ಮರದ ಮೇಲೆ ಮಲಗುವುದು ಮಾಡುತ್ತಿದ್ದವು. ಎರಡು ದಿನದ ನಂತರ ಅಲ್ಲಿ ಹೋಗಿ ನಿಲ್ಲುವುದು ನಿಜಕ್ಕೂ ಕಷ್ಟವಾಯಿತು. ಏಕೆಂದರೆ ಅಷ್ಟೊತ್ತಿಗಾಗಲೇ ಕಾಡೆಮ್ಮೆಯ ಹೊಟ್ಟೆ ಒಡೆದು ಹೋಗಿ ದುರ್ವಾಸನೆ ಎಲ್ಲ ಕಡೆ ಹಬ್ಬಿತ್ತು. ಅಲ್ಲಿ ಮನುಷ್ಯ ಮಾತ್ರದವನು ನಿಲ್ಲುವುದಿರಲಿ ನಿಂತರೆ ಸತ್ತೇ ಹೋಗುವಷ್ಟು ದುರ್ನಾಥ ಹಬ್ಬಿಹೋಗಿತ್ತು.

'ನಮಗಾಗದವರನ್ನು ಇಲ್ಲಿ ತಂದು ಅರ್ಧಗಂಟೆ ಕಟ್ಟಿ ಹಾಕಬಹುದು. ಈ ವಾಸನೆಗೆ ಅವರ ಕರುಳೇ ಕಿತ್ತುಕೊಂಡು, ಈಚೆಗೆ ಬಂದು ಕೆಲವೇ ಗಂಟೆಗಳಲ್ಲಿ ನೆಗೆದು ಬಿದ್ದು ಹೋಗುತ್ತಾರೆ ಅಲ್ಲವೇ?' ಎಂದು ನಾನು ತಮಾಷೆ ಮಾಡಿದೆ. ಅದಕ್ಕೆ ಶ್ರೀಕಾಂತ್ 'ಇಲ್ಲಿನ ಯಾವುದಾದರೂ ಮರಕ್ಕೆ ಅವರನ್ನು ಬಿಗಿದರೆ ದುರ್ವಾಸನೆ ಇರಲಿ, ಈ ಚಿರತೆಗಳನ್ನು ನೋಡಿಯೇ ಅವರ ಪ್ರಾಣ ಹಾರಿ ಹೋಗಿರುತ್ತದೆ ಅಲ್ಲವೇ? ' ಎಂದು ನನ್ನ ಮಾತಿಗೆ ಇಂಬು ಕೊಟ್ಟರು. ನಾವು ಅಲ್ಲಿಂದ ಹೊರಟು ಬಂದ ಮೇಲೂ ನಾನು ಅಷ್ಟೊಂದು ದೊಡ್ಡ ಕಾಡೆಮ್ಮೆಯನ್ನು ಚಿರತೆಗಳು ಹೇಗೆ ಶಿಕಾರಿ ಮಾಡಿದವು ಎಂದು ತಾಂತ್ರಿಕವಾಗಿ ಆಲೋಚನೆ ಮಾಡುತ್ತಲೇ ಇದ್ದೆ.

ಅಲ್ಲಿಗೆ ಮತ್ತೆ ಹೋಗಿದ್ದ ಮಂಜು ನನಗೆ ಫೋನ್ ಮಾಡಿ 'ಸರ್ ಅದನ್ನು ಕೊಂದಿರೋದು ಈ ಚಿರತೆಗಳಲ್ಲ. ನಿಮ್ಮ ರಾಣಿ ಹುಲಿ ಇದೆಯಲ್ಲ; ಅದೇ ತನ್ನ ಮರಿಗಳಿಗಾಗಿ ಹೊಡೆದಿರೋದು. ಇವತ್ತು ಬಂದು ಉಳಿದ ಅರ್ಧ ಭಾಗನ ಎಳ್ಕೊಂಡು ಹೋಗ್ತಿತ್ತು' ಎಂದು ಹೇಳಿದ. ಹಾಗಾದರೆ ನನ್ನ ಊಹೆಯೇ ಖಚಿತವಾಗಿದೆ. ಹುಲಿ ಮಾತ್ರ ತನಗಿಂತ ಪ್ರಬಲವಾದ ಪ್ರಾಣಿಯನ್ನು ಶಿಕಾರಿ ಮಾಡುವ ತಾಕತ್ತು ತೋರಬಲ್ಲ ಜೀವಿ. ಒಂದೊಮ್ಮೆ ಚಿರತೆಗಳೇ ಕೊಂದಿದ್ದರೆ ಹುಲಿ ಬಂದು ಅದಕ್ಕೆ ಬಾಯಿ ಹಾಕುವುದು ಕಡಿಮೆ ಛಾನ್ಸಿನ ವಿಷಯ. ಹುಲಿ ಯಾವತ್ತೂ ತಾನೇ ಸ್ವತಂತ್ರವಾಗಿ ಬೇಟೆಯಾಡುತ್ತದೆ. ಕಂಡವರ ತಟ್ಟೆಗೆ ಅದು ಕೈ ಹಾಕುವುದು ಕಡಿಮೆ. ಜೊತೆಗೆ ಈ ಮೊದಲು ರಾಣಿಹುಲಿ ಕಾಡೆಮ್ಮೆಗಳ ಮೇಲೆ ದಾಳಿ ಮಾಡಿ ಕೊಂದಿದ್ದನ್ನು ನಾನೇ ಸ್ವತಃ ಕಣ್ಣಾರೆ ನೋಡಿ ಚಿತ್ರಿಸಿದ್ದೆ. ಅದರ ಬೇಟೆಯಾಡುವ ಶೈಲಿಯನ್ನು ನೋಡಿ ಅಚ್ಚರಿಗೊಂಡಿದ್ದೆ.

ಕಾಡಿನ ಯಾವುದೇ ಭಾಗದಲ್ಲಿ ನಡೆಯುವ ಬೇಟೆಯ ವಿಷಯ ತಕ್ಷಣಕ್ಕೆ ಮಾಂಸ ಅವಲಂಬಿಸಿ ಬದುಕುವ ಎಲ್ಲಾ ಪ್ರಾಣಿ ಪಕ್ಷಿಗಳಿಗೆ ಪಕ್ಕನೆ ತಿಳಿದು ಹೋಗುತ್ತದೆ. ಅಚ್ಚರಿ ಎಂದರೆ ನಾನು ಪಕ್ಕಾ ಸಸ್ಯಹಾರಿಗಳೆಂದು ಭಾವಿಸಿದ್ದ ಕಾಡು ಹಂದಿಗಳು ಕೂಡ ಕಾಡೆಮ್ಮೆಯ ಹೊಟ್ಟೆಯ ಬಗೆದು ಅದರ ಕಸವನ್ನೆಲ್ಲ ತಿನ್ನುವ ದೃಶ್ಯವನ್ನು ನೋಡಿದ್ದೇನೆ. ಬಲಿಯಾಗುವ ಪ್ರಾಣಿಯ ಪ್ರತಿ ಅಂಶವನ್ನು ಅಲ್ಲಿರುವ ಇರುವೆಗಳಿಂದ ಹಿಡಿದು ಪ್ರಾಣಿ ಪಕ್ಷಿಗಳೆಲ್ಲವೂ ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಹಂಚಿ ತಿನ್ನುತ್ತವೆ. ಕೊನೆಗೆ ಮೂಳೆ ಬಿಟ್ಟರೆ ಮತ್ತೇನೂ ಉಳಿಯುವುದಿಲ್ಲ. ಆ ಕಾಡೆಮ್ಮೆ ಹಳ್ಳದ ನೀರಿನಲ್ಲಿ ಉರುಳಿ ಬಿದ್ದ ಕಾರಣ ನೀರು ಕೂಡ ಸತ್ತ ಸುದ್ದಿಯನ್ನು ತುಂಬಾ ದೂರದ ತನಕ ತಲುಪಿಸುತ್ತದೆ. ಆಗ ಏಡಿಗಳು, ಮೀನುಗಳು ಕೂಡ ಸಕ್ರಿಯಗೊಂಡು ನಾತದ ಜಾಡು ಹಿಡಿದು ಬರುತ್ತವೆ. ಒಂದು ವಾಸನೆ ಕೂಡ ಕಾಡಿನ ಭಾಷೆಯಾಗಿ ಪರಿವರ್ತನೆ ಆಗುವ ವಿಸ್ಮಯವಿದು. ಇದನ್ನು ಕಣ್ಣಾರೆ ಕಂಡ ಮೇಲೆ ನನಗೆ ಈ ಕಾಡಿನ ಬಗೆಗಿನ ಕುತೂಹಲ ಮತ್ತು ಪ್ರೀತಿಗಳು ಮತ್ತಷ್ಟು ಹೆಚ್ಚಾದವು.

ಬೇಟೆಯಾಡಿದ ಪ್ರಾಣಿ ತಾನೇ ಎಲ್ಲವನ್ನು ತಿನ್ನುವುದಕ್ಕೆ ಆಗುವುದಿಲ್ಲ. ಎಷ್ಟೋ ಸಲ ಬೇಟೆಯಾಡಿದ ಪ್ರಾಣಿಯನ್ನೇ ಹೆದರಿಸಿ ಅದರಿಂದಲೇ ಆಹಾರವನ್ನು ಕಿತ್ತುಕೊಂಡು ಹೋಗುವ ನರಿ, ಹೈನ, ಕಾಡು ನಾಯಿಗಳು ಚಾಣಾಕ್ಷತೆಯಿಂದ ವರ್ತಿಸುತ್ತವೆ. ತಮಗಿಂತ ಶಕ್ತಿಶಾಲಿ ಪ್ರಾಣಿಗಳನ್ನು ಕಾಡಿಸಿ ಅವುಗಳ ಬೇಟೆಯನ್ನು ತಿನ್ನುವುದರಲ್ಲಿ ಇವು ಯಾವತ್ತು ಹಿಂದೆ ಮುಂದೆ ನೋಡುವುದಿಲ್ಲ. ಅದರಲ್ಲೂ ನರಿಯಂತೂ ಹೇಳುವುದೇ ಬೇಡ. ಉಪಾಯವಾಗಿ ಪುಕ್ಕಟೆ ಗಿಟ್ಟಿಸಿಕೊಳ್ಳುವುದು ಅದಕ್ಕೆ ಚೆನ್ನಾಗಿ ಗೊತ್ತು. ಹೀಗಾಗಿ ಎಷ್ಟೋ ಸಲ ಕಷ್ಟಪಟ್ಟು ಕೊಲ್ಲುವ ಪ್ರಾಣಿಗೇ ತನ್ನ ಆಹಾರ ಇಲ್ಲವಾಗುತ್ತದೆ. ಹೋರಾಟ ಮಾಡಿ ಗೆಲ್ಲುವ ಚಾಕಚಕ್ಯತೆ, ಶಕ್ತಿ, ರಣತಂತ್ರ ಗೊತ್ತಿರುವ ಪ್ರಾಣಿಗಳಷ್ಟೇ ಕಾಡಿನಲ್ಲಿ ಬದುಕುಳಿಯಲು ಸಾಧ್ಯ. ●